# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1504 |
| 2 | ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 20/03/2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಎಸ್.ಆರ್.ಪಿ ಹಾಗೂ ಐ.ಆರ್.ಬಿ ಘಟಕಗಳಲ್ಲಿ ಐದು ವರ್ಷಕ್ಕಿಂತಲೂ ಅಧಿಕವಾಗಿ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ (ಶಿಬಿರ ನಾಯಕರು, ಸುಬೇದಾರ್, ಮೇಜರ್, ವಾಹನಸಾರಿಗೆ ಅಧಿಕಾರಿ, ಕಂಪನಿ ಕಮಾಂಡರ್) ಗಳ ಸಂಖ್ಯೆ ಎಷ್ಟು; ಅಂತಹವರನ್ನು ನಿಯಮಾವಳಿಯ ಪ್ರಕಾರ ವರ್ಗಾವಣೆ ಮಾಡದೇ ಇರಲು ಕಾರಣಗಳೇನು: | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಅಧೀನ ಘಟಕಗಳಲ್ಲಿ ಒಟ್ಟು 40 ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್‌ಗಳು 05 ವರ್ಷಕ್ಕಿಂತ ಮೇಲ್ಪಟ್ಟು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಒಂದೇ ಘಟಕದಲ್ಲಿ ದೀರ್ಘಕಾಲದಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಸರದಿ ಆಧಾರದ ಮೇಲೆ ಕರ್ತವ್ಯ ಬದಲಾಯಿಸುವ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಅಧೀನ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಆಡಳಿತಾತ್ಮಕ ಕಾರಣ ಹಾಗೂ ಸ್ವಂತ ಕೋರಿಕೆ ಮೇರೆಗೆ ವರ್ಗಾವಣೆ ಮಾಡಲಾಗುತ್ತಿದೆ. |
| ಆ) | ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಸಹಾಯಕ ಕಮಾಂಡೆಂಟ್ ಹುದ್ದೆಯಲ್ಲಿ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ? (ಮಾಹಿತಿ ನೀಡುವುದು) | ಸ್ಪೆಷಲ್ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ ವೃಂದದಲ್ಲಿ 01 ಎಸ್.ಟಿ ಬ್ಯಾಕ್‌ಲಾಗ್ ಹುದ್ದೆ ಬಾಕಿಯಿರುತ್ತದೆ. ಸಹಾಯಕ ಕಮಾಂಡೆಂಟ್ ರವರುಗಳ ವೃಂದದಲ್ಲಿ 02 ಎಸ್‌ಸಿ ಮತ್ತು 02 ಎಸ್‌ಟಿ ಬ್ಯಾಕ್‌ಲಾಗ್ ಹುದ್ದೆಗಳಿರುತ್ತವೆ. |

ಸಂಖ್ಯೆ: ಒಇ 43 ಪಿಇಎಂ 2025

(ಡಾ: ಜಿ ಪರಮೇಶ್ವರ)
ಗೃಹ ಸಚಿವರು